ಕನ್ನಡದ ಪ್ರಾತಃಸ್ಮರಣೀಯ ಸಾಹಿತಿ 'ಅ.ನ.ಕೃ' ಜನ್ಮ ಶತಮಾನೋತ್ಸವ

# 'ಅನ್ನಪೂರ್ಣ' ಮನೆ ಈಗಲೂ ಅನಾಥ!

**ರಾಮಕೃಷ್ಣ ಸಿದ್ರಪಾಲ**

ಪ್ರಜಾವಾಣಿ ವಾರ್ತೆ



ಬೆಂಗಳೂರಿನ ವಿಶ್ವೇಶ್ವರ ಪುರದಲ್ಲಿ ಅನಾಥವಾಗಿರುವ ಅನಕೃ ಅವರ ಮನೆ 'ಅನ್ನಪೂರ್ಣ'ದ ಹೊರನೋಟ.

ಬೆಂಗಳೂರು: 'ಕಾಲ ಎಲ್ಲವನ್ನೂ ಮರೆಸುತ್ತದೆ. ನೆನಪುಗಳನ್ನು ಅಳಿಸಿ ಹಾಕುತ್ತದೆ' ಎನ್ನುತ್ತಾರೆ. ಇದು ಕೆಲವೊಮ್ಮೆ ಎಷ್ಟು ಒಳ್ಳೆಯದೋ ಹಲವು ಬಾರಿ ಅಷ್ಟೇ ಕ್ರೂರ.

ಈ ಮಾತನ್ನು ಸಾಹಿತಿ ಅ.ನ.ಕೃ ವಿಚಾರಕ್ಕೂ ಅನ್ವಯಿಸಬಹುದು.

ಕನ್ನಡ ಕಟ್ಟಿದ, ಕರ್ನಾಟಕ ಏಕೀಕರಣ ಚಳವಳಿಯಲ್ಲಿ ಪ್ರಮುಖ ಪಾತ್ರ ವಹಿಸಿದ್ದ, ನಾಡಿನಾದ್ಯಂತ ಸಂಚರಿಸಿ ತಮ್ಮ ಭಾಷಣಗಳ ಮೂಲಕ ಕನ್ನಡಿಗರೆದೆಯಲ್ಲಿ ಸ್ವಾಭಿಮಾನದ ಕಿಚ್ಚೆಬ್ಬಿಸುತ್ತಿದ್ದ, ಕನ್ನಡಿಗರಿಗೆ ಓದುವ ಹಸಿವನ್ನು ಹೆಚ್ಚಿಸಿದ್ದ ಸಾಹಿತಿ, 'ಅ.ನ.ಕೃಷ್ಣರಾಯರು ಅಚ್ಚ ಕನ್ನಡಿಗರು' ಎಂದು ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರಿಂದ ಹೊಗಳಿಸಿಕೊಂಡಿದ್ದರು. ತಮ್ಮ ಬದುಕಿನುದ್ದಕ್ಕೂ ಕನ್ನಡದ ಹಿತಾಸಕ್ತಿಯನ್ನೇ ಧ್ಯೇಯವಾಗಿಸಿ ಕೊಂಡು ಬಾಳಿ ಬದುಕಿದ್ದ ಅನಕೃ ಇಂದು ಕನ್ನಡಿಗರೆದೆಯಿಂದ ದೂರವಾಗಿದ್ದಾರಾ?

250ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿರುವ ಅನಕೃ (ಅರಕಲಗೂಡು ನರಸಿಂಗರಾಯ ಕೃಷ್ಣರಾಯರು) ಜನಿಸಿದ್ದು ಮೇ 9, 1908 ಕೋಲಾರದಲ್ಲಿ; ನೆಲೆನಿಂತದ್ದು ಬೆಂಗಳೂರಿನಲ್ಲಿ. ಬದುಕಿದ್ದರೆ ಈಗ ಅವರಿಗೆ ನೂರು ವರ್ಷ. ಬದುಕಿದ್ದಾಗ ಕಲಾವಿದರು, ಚಿತ್ರಕಾರರು, ಸಂಗೀತಗಾರರು ಸೇರಿದಂತೆ ಎಲ್ಲರಿಂದ ತುಂಬಿಕೊಂಡು ನಿಜ ಅರ್ಥದಲ್ಲಿ 'ಅನ್ನಪೂರ್ಣ'ವಾಗಿದ್ದ ಅವರ ಮನೆ ಈಗ ಕಸ,ಕಡ್ಡಿ, ಪಾರ್ಥೇನಿಯಂನಿಂದ ತುಂಬಿಕೊಂಡು ಪಾಳುಬಿದ್ದಿದೆ.

**ಜನ್ಮಶತಮಾನೋತ್ಸವದಲ್ಲೂ ಸುಧಾರಣೆಯಿಲ್ಲ:**

ಇದೇ 19ರಂದು ಬೆಂಗಳೂರಿನಲ್ಲಿ ನಡೆಯುತ್ತಿರುವ ಅವರ ಜನ್ಮ ಶತಮಾನೋತ್ಸವದ ಹಿನ್ನೆಲೆಯಲ್ಲಿ ಅವರ ವಿವಿಪುರದ ಸಜ್ಜನರಾವ್ ವೃತ್ತದ ಸಮೀಪದಲ್ಲಿರುವ ಅವರ ಮನೆಯನ್ನು ಹುಡುಕಿಕೊಂಡು ಹೋದರೆ ಅದು ಅನಾಥವಾಗಿ ನೂರು ಕಥೆ ಹೇಳುತ್ತ ಮೌನವಾಗಿ ರೋಧಿಸುತ್ತಿದೆ.

ಅಲ್ಲಿನ ರೋಷನ್ ಬೇಗ್ ರಸ್ತೆಯಲ್ಲಿ ಆಟೊ ಗ್ಯಾರೇಜ್ ಪಕ್ಕದಲ್ಲಿ, ಕಸ ಎತ್ತದೇ ಗಬ್ಬುನಾರುವ, ಒಳಚರಂಡಿ ಉಕ್ಕಿ ಹರಿಯುವ ಫುಟ್‌ಪಾತ್ ಇಲ್ಲದ ರಸ್ತೆಯಲ್ಲಿ ಪಾರ್ಥೇನಿಯಂ ಕಳೆ ತುಂಬಿಕೊಂಡು ವಿಶಿಷ್ಟ ವಾಸ್ತುಶಿಲ್ಪದ ಮಾಸಿದ ತಿಳಿಗುಲಾಬಿ ಬಣ್ಣದ ಮನೆಯೊಂದು ಬರಡಾಗಿ ನಿಂತಿರುವುದು ಕಾಣುತ್ತದೆ.

**ಬಜೆಟ್‌ನಲ್ಲಿ ಘೋಷಿಸಿದ್ದು ಒಂದು ಕೋಟಿ**

ಅನಕೃ ಮನೆಯನ್ನು ಸ್ಮಾರಕವಾಗಿಸಲು ಒಂದು ಕೋಟಿ ರೂಪಾಯಿ ನೀಡುವುದಾಗಿ ಕಳೆದ ವರ್ಷ ಬಜೆಟ್‌ನಲ್ಲಿ ಘೋಷಿಸಿದ್ದ ಉಪಮುಖ್ಯಮಂತ್ರಿ ಬಿ.ಎಸ್‌ಯಡಿಯೂರಪ್ಪ, 'ಸ್ಮಾರಕ ಮಾಡುತ್ತೇವೆ' ಎಂದಿದ್ದ ಮುಖ್ಯಮಂತ್ರಿ ಎಚ್.ಡಿ.ಕುಮಾರಸ್ವಾಮಿ ಈಗ ಅಧಿಕಾರಿ ಕಳೆದುಕೊಂಡಿದ್ದಾರೆ.

**ಮಾರಾಟ-ಚಪ್ಪಲಿ ಗೋದಾಮು:**

ಅನಕೃ ಬಾಳಿ ಬದುಕಿದ್ದ ಅವರ ಮನೆ 'ಅನ್ನಪೂರ್ಣ' ಅಕ್ಷರಶಃ ಅನಾಥ. ಆ ಮನೆಯ ಪ್ರಕರಣ ಈಗ ಕೋರ್ಟ್ ಕಟಕಟೆಯನ್ನು ಹತ್ತಿ ನ್ಯಾಯಾಲಯದಲ್ಲಿರುವ ಕಾರಣ ಯಾರೂ ಏನು ಮಾಡಲಾಗ ಸ್ಥಿತಿ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹೇಳುತ್ತಿದೆ.

ಅನಕೃ ಬೇರೆ ಯಾರಿಗೋ ಈ ಮನೆಯನ್ನು ಮಾರಾಟ ಮಾಡಿದ್ದರು. ಆ ಮಹಾ ಶಯರು ಈ ಮನೆಯನ್ನು ಚಪ್ಪಲಿ ಗೋದಾಮು ಮಾಡಿದ್ದರು. ಬಗ್ಗೆ ಪ್ರತಿಭಟನೆಗಳೂ ನಡೆದಿದ್ದವು.

ತಮ್ಮ ಬದುಕನ್ನು ಬರವಣಿಗೆ ಹಾಗೂ ಸಾರ್ವಜನಿಕ ಸೇವೆಗಾಗಿಯೇ ಮೀಸಲಾಗಿಟ್ಟ ಅನಕೃ ಅವರಿಗೆ ನೀಡಬೇಕಾದ ಸ್ಥಾನಮಾನ ಹಾಗೂ ಅವರ ಮನೆಯನ್ನು ಸ್ಮಾರಕವಾಗಿಸುವಲ್ಲಿ ಕನ್ನಡ ಸಾಹಿತ್ಯ ಪರಿಷತ್ ಆಗಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಯಾಗಲಿ ಸಂಪೂರ್ಣ ನಿರ್ಲಕ್ಷ್ಯ ಧೋರಣೆ ತಾಳಿದೆ.

## 19ರಂದು ಅನಕೃ ಜನ್ಮ ಶತಮಾನೋತ್ಸವ

ಸುಮಾರು ನಾಲ್ಕು ದಶಕಗಳ ಕಾಲ ಕನ್ನಡವನ್ನು, ಕರ್ನಾಟಕವನ್ನು ಕಟ್ಟಲು ಶ್ರಮಿಸಿದ ಅ.ನ.ಕೃ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇದೇ 19ರಂದು ಬೆಳಿಗ್ಗೆ 11 ಗಂಟೆಗೆ ನಯನ ಸಭಾಂಗಣದಲ್ಲಿ ಜನ್ಮಶತಮಾನೋತ್ಸವ ಹಮ್ಮಿಕೊಂಡಿದೆ.

ಇದರ ಅಂಗವಾಗಿ ಅವರ ಕೃತಿಗಳ ಕುರಿತು ವಿಚಾರ ಸಂಕಿರಣ, ಪುಸ್ತಕ ಪ್ರದರ್ಶನ ಮತ್ತು ಛಾಯಾಚಿತ್ರಗಳ ಪ್ರದರ್ಶನ ಏರ್ಪಡಿಸುತ್ತಿದೆ. ಹಾಗೇ ಅವರ ಕೃತಿಗಳ ಪ್ರದರ್ಶನ ಏರ್ಪಡಿಸಿದೆ.

ರಾಷ್ಟ್ರಕವಿ ಡಾ. ಜಿ.ಎಸ್.ಶಿವರುದ್ರಪ್ಪ ಉದ್ಘಾಟಿಸಲಿರುವ ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಹಿರಿಯ ಸಾಹಿತಿ ಪ್ರೊ. ಬರಗೂರು ರಾಮಚಂದ್ರಪ್ಪ ವಹಿಸಲಿದ್ದಾರೆ. ಅನಕೃ ಪ್ರತಿಷ್ಠಾನದ ಅಧ್ಯಕ್ಷ ಮಾಜಿ ಸಚಿವ ಹಾರನಹಳ್ಳಿ ರಾಮಸ್ವಾಮಿ ಉಪಸ್ಥಿತರಿರುತ್ತಾರೆ.

ಅದೇ ಮಧ್ಯಾಹ್ನ 12.30ಕ್ಕೆ ಅನಕೃ ಕುರಿತ ವಿಚಾರಸಂಕಿರಣವನ್ನೂ ಏರ್ಪಡಿಸಲಾಗಿದೆ. 'ಅನಕೃ ಸಾಹಿತ್ಯದ ಮೌಲ್ಯ ವಿನ್ಯಾಸ' ಕುರಿತು ಡಾ. ಬಸವರಾಜ ಕಲ್ಗುಡಿ, 'ಅನಕೃ ಕಾದಂಬರಿಗಳಲ್ಲಿ ಚಾರಿತ್ರಿಕ ವಸ್ತುವಿನ್ಯಾಸ' ಕುರಿತು ಡಾ. ಬಂಜಗೆರೆ ಜಯಪ್ರಕಾಶ್, 'ಅನಕೃ ಮತ್ತು ಕನ್ನಡ ಸಾಂಸ್ಕೃತಿಕ ನೆಲೆ' ಕುರಿತು ಡಾ. ಎಲ್.ಜಿ.ಮೀರಾ ಹಾಗೂ 'ಅನಕೃ ಮತ್ತು ಪ್ರಗತಿಶೀಲ ಚಳವಳಿ' ಕುರಿತು ರಾಮಚಂದ್ರ ಶರ್ಮ ತ್ಯಾಗಲಿ ಮಾತನಾಡಲಿದ್ದಾರೆ ಎಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ ಮನು ಬಳಿಗಾರ್ ತಿಳಿಸಿದ್ದಾರೆ.